SEVA BHARATHI
सेवा ही परमो धर्मः

ಸಂಚಿಕೆ : 04
ಸಂಪುಟ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e–ನ್ಯೂಸ್ ಲೆಟರ್ – ಏಪ್ರಿಲ್ 2023

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216





## ಧರ್ಮಸ್ಥಳ & ಉಜಿರೆಯಲ್ಲಿ ಬೃಹತ್ ರಕ್ತದಾನ ಶಿಬಿರ

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತದ ವಾರ್ಷಿಕ ಕ್ರಿಯಾಯೋಜನಾ ಸಭೆ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ & ಸಂದರ್ಶಕರ ಅನಿಸಿಕೆ

## ರಾಷ್ಟ್ರೀಯ ಸೇವಾಸಂಗಮ -2023

## ಸೇವಾಧಾಮದಲ್ಲಿ ಕು. ಭಾವನಳ ಹುಟ್ಟುಹಬ್ಬ ಆಚರಣೆ

## ಬೆನ್ನುಹುರಿ ಅಪಘಾತಕ್ಕೊಳಗಾದರೂ ತನ್ನ ಜೀವನವನ್ನು ಕೃಷಿಯಲ್ಲಿ ರೂಪಿಸಿಕೊಂಡ ನವೀನ್ ಮುರೂಳ್ಯರವರ ಯಶೋಗಾಥೆ

## ನಮ್ಮಿಂದಿಷ್ಟು

2023–24ನೇ ಆರ್ಥಿಕ ವರ್ಷಾರಂಭ. ನಮ್ಮ ಈ ವರ್ಷದ ಯೋಜನೆ ಮತ್ತು ಬಜೆಟ್‌ನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯ ಮೊದಲ ಮಾಸ. ಈ ತಿಂಗಳು 2 ರಕ್ತದಾನ ಶಿಬಿರಗಳು ಯಶಸ್ವಿಯಾಗಿ ಆಯೋಜನೆಗೊಂಡಿವೆ. ಒಂದೆಡೆ ಚುನಾವಣೆಯ ಹೊಸ್ತಿಲು, ಇನ್ನೊಂದೆಡೆ ವಾರದ ಮಧ್ಯದಲ್ಲಿ ಒಂದು ಶಿಬಿರ ಸಂಪನ್ನಗೊಂಡಿರುವುದು ಹೆಮ್ಮೆ.

ಧರ್ಮಸ್ಥಳದಲ್ಲಿ ನಡೆದ ಈ ರಕ್ತದಾನದ ಯಶಸ್ಸು ಯುವ ಕಾರ್ಯಕರ್ತ ಶ್ರೀ ಸುಧಾಕರರಿಗೆ ಸಲ್ಲಬೇಕು. ಉಜಿರೆಯ ಯಶಸ್ಸು ಶ್ರಿಯುತ ಶ್ರೀಧರ ಕೆ.ಪಿ.ಯವರಿಗೆ ಸಲ್ಲಬೇಕಿರುವುದು. ಇಬ್ಬರ ನೇತೃತ್ವದಲ್ಲಿ ನಮ್ಮೆಲ್ಲರ ಸಂಘಟಿತ ಪ್ರಯತ್ನ ಹಾಗೂ ಇತರೇ ಸಂಘ ಸಂಸ್ಥೆಗಳು ಕೈಜೋಡಿಸಿರುವುದು ಯಶಸ್ಸಿಗೆ ಕಾರಣ ವಾಗಿದೆ.

ರಕ್ತದಾನ ಶಿಬಿರಗಳಲ್ಲಿ ಮಹಿಳೆಯರೂ ಗಣನೀಯವಾಗಿ ಭಾಗವಹಿಸುತ್ತಿರುವುದು ಜಾಗೃತ ಸ್ತ್ರೀಶಕ್ತಿ ಉದಾಹರಣೆ ಎನ್ನಬಹುದು. ಇನ್ನಷ್ಟು ಜಾಗೃತಿಗಳು ನಿರಂತರವಾಗಿ ಮೂಡಲಿ ಎಂಬುದು ನಮ್ಮ ಆಶಯ.

ನಿಧಾನವಾಗಿ 2 ಜಿಲ್ಲೆಗಳಿಗೆ ನಮ್ಮ ಸೇವೆ ಈಗಾಗಲೇ ವ್ಯಾಪಿಸಲು ಪ್ರಾರಂಭಗೊಂಡಿದೆ. ಈಗಾಗಲೇ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆದ ಮಾಹಿತಿ ಮತ್ತು ಜಾಗೃತಿ ಕಾರ್ಯಗಳು ಗುಣಾತ್ಮಕ ಹಾಗೂ ಸಂಖ್ಯಾತ್ಮಕವಾಗಿಯೂ ಪ್ರೇರಣಾದಾಯಕ ಸಂಗತಿ. ಬೆಂಗಳೂರಿನಲ್ಲಿ ಮುಂದಿನ ತಿಂಗಳು ನಡೆಯುವ ಟಿ.ಸಿ.ಎಸ್. world 10K ಮ್ಯಾರಥಾನ್ ನಲ್ಲಿ ಭಾಗವಹಿಸಲು ತಯಾರಿಗಳು ನಡೆಯುತ್ತಿವೆ.

ಇತೀ ತಮ್ಮವ,
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

### ಪ್ರಧಾನ ಕಚೇರಿ :

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

### ಜಿಲ್ಲಾ ಕಚೇರಿ :

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

### ಸೇವಾ ಕೇಂದ್ರ :

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಶ್ರೀಮತಿ ಮನೋರಮ ಭಟ್
3. ಶ್ರೀ ಉದಯಶಂಕರ್
4. ಶ್ರೀ ಹರೀಶ್ ಟಿ. ಪಿ.
5. ಶ್ರೀ ಗೋಪಾಲ ಕೆ. ವಿ.
6. ಶ್ರೀಮತಿ ಜೊಯ್ಸ್ ಪಿರೇರಾ
7. ಶ್ರೀ ರಜತ್‌ರಾವ್, ಧರ್ಮಸ್ಥಳ
8. ಶ್ರೀ ವಿಜಯ ಕೊಡವೂರು
9. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

*I dont need easy, I just need possible*

# ಉಜಿರೆಯಲ್ಲಿ ಬೃಹತ್ ರಕ್ತದಾನ ಶಿಬಿರ




**ಉಜಿರೆ (ಎ.30):** ಉಜಿರೆಯ ಶ್ರೀ ಜನಾರ್ದನ ಸ್ವಾಮಿ ಸೇವಾ ಟ್ರಸ್ಟ್ ಇದರ ನೇತೃತ್ವದಲ್ಲಿ ಮಂಗಳೂರಿನ ಕೆ.ಎಂ.ಸಿ ಬ್ಲಡ್‌ಬ್ಯಾಂಕ್‌ನ ಸಹಭಾಗಿತ್ವದಲ್ಲಿ ಬೃಹತ್ ರಕ್ತದಾನ ಶಿಬಿರವು ಎಪ್ರಿಲ್ 30 ರಂದು ಉಜಿರೆಯ ಶಾರದಾ ಮಂಟಪದಲ್ಲಿ ನಡೆಯಿತು.


ಕಾರ್ಯಕ್ರಮದಲ್ಲಿ ಸೇವಾಭಾರತಿ ಸಂಸ್ಥೆಯ ಖಜಾಂಚಿ ಕೆ.ವಿನಾಯಕ ರಾವ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ರೋಟರಿ ಕ್ಲಬ್ ಬೆಳ್ತಂಗಡಿಯ ನಿಯೋಜಿತ ಅಧ್ಯಕ್ಷರಾದ ರೊ। ಅನಂತ ಭಟ್ ಮಚ್ಚಿಮಲೆ ಶಿಬಿರವನ್ನು ಉದ್ಘಾಟಿಸಿ, ರಕ್ತದಾನದ ತುರ್ತು ಅವಶ್ಯಕತೆಯ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಸೈನಿಕರು ಹಾಗೂ ಪ್ರಗತಿಪರ ಕೃಷಿಕರಾದ ಶ್ರೀ ಕೃಷ್ಣ ಭಟ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರೋಟರಿ ಕ್ಲಬ್ ಬೆಳ್ತಂಗಡಿಯ ಅಧ್ಯಕ್ಷರಾದ ರೊ. ಶ್ರೀಮತಿ ಮನೋರಮ ಭಟ್, ಬೆಳ್ತಂಗಡಿ ತಾಲೂಕು ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ರೊ. ಶ್ರೀಧರ ಕೆ.ವಿ, ಶ್ರೀಮತಿ ವನಿತ ವಿ. ಶೆಟ್ಟಿ, ಅಧ್ಯಕ್ಷರು, ಬಂಟರ ಸಂಘ ಉಜಿರೆ ವಲಯ, ಸೇವಾಭಾರತಿ ಬೆಳ್ತಂಗಡಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ, ವರ್ತಕರ ಸಂಘ(ರಿ.), ಉಜಿರೆ ಇದರ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಗೌಡ, ರೋಟರಿ ಕ್ಲಬ್ ಬೆಳ್ತಂಗಡಿಯ ಕಾರ್ಯದರ್ಶಿ ರೊ. ಶ್ರೀಮತಿ ರಕ್ಷಾ ರಾಗ್ನೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರದಲ್ಲಿ ಒಟ್ಟು 136 ಯೂನಿಟ್ಸ್ ರಕ್ತ ಸಂಗ್ರಹಿಸಲಾಯಿತು. ಉಜಿರೆಯ ಬೆನಕ ಹೆಲ್ತ್ ಸೆಂಟರ್‌ನ ಹಾಸ್ಪಿಟಾಲಿಟಿ ಮ್ಯಾನೇಜರ್ ಎಸ್. ಜಿ.ಭಟ್ ಕಾರ್ಯಕ್ರಮವನ್ನು ನಿರೂಪಿಸಿದರು.

ಸೇವಾಭಾರತಿ(ರಿ.) ಕನ್ಯಾಡಿ ಇದರ ಶಿಬಿರದ ಸಂಯೋಜನೆಯೊಂದಿಗೆ, ಶ್ರೀ ಶಾರದಾ ಸೇವಾ ಟ್ರಸ್ಟ್ (ರಿ), ಉಜಿರೆ, ಬೆಳ್ತಂಗಡಿ ತಾಲೂಕು ಔಷಧಿ ವ್ಯಾಪಾರಸ್ಥರ ಸಂಘ, ರೋಟರಿ ಕ್ಲಬ್ ಬೆಳ್ತಂಗಡಿ, ರಾಷ್ಟ್ರೀಯ ಸೇವಾ ಯೋಜನಾ ಘಟಕ ಎಸ್.ಡಿ.ಎಂ ಕಾಲೇಜು, ಉಜಿರೆ, ಹವ್ಯಕ ವಲಯ ಉಜಿರೆ, ಬಂಟರ ಸಂಘ ಉಜಿರೆ ವಲಯ, ಸಿಂಧು ಎಲೆಕ್ಟ್ರಿಕಲ್ಸ್ ಉಜಿರೆ, ರಿಕ್ಷಾ ಮಾಲಕ-ಚಾಲಕರ ಸಂಘ(ರಿ.)ಉಜಿರೆ, ಮಂಜುಶ್ರೀ ಪ್ರಿಂಟರ್ಸ್ ಉಜಿರೆ, ಹಿಂದೂ ಜಾಗರಣ ವೇದಿಕೆ ಉಜಿರೆ, ಬೆನಕ ಹೆಲ್ತ್ ಸೆಂಟರ್ ಉಜಿರೆ, ಪ್ರಗತಿ ಮಹಿಳಾ ಮಂಡಲ (ರಿ.), ಉಜಿರೆ, ಪಾರ ಫ್ರೆಂಡ್ಸ್, ಅತ್ತಾಜೆ, ಉಜಿರೆ ಇವುಗಳು ಶಿಬಿರದ ಯಶಸ್ವಿಗೆ ಸಹಕರಿಸಿತು.

## ದಾನಿಗಳು




ದಿನಾಂಕ 24/04/2023ರಂದು ಧರ್ಮಸ್ಥಳ ಗ್ರಾಮದ ಅಜಿಕುರಿಯ ನಿವಾಸಿಗಳಾದ ಶ್ರೀ ಸಂದೇಶ್ ಕುಮಾರ್ ರಾವ್ ಹಾಗೂ ಮಾತೃಶ್ರೀ ಶ್ರೀಮತಿ ಇಂದಿರಾ ರಾವ್ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಭೇಟಿನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಆರೋಗ್ಯ ವಿಚಾರಿಸಿ, ತಮ್ಮ ತಂದೆ ದಿ. ಶ್ರೀ ವಸಂತ ರಾವ್‌ರವರ ಸ್ಮರಣಾರ್ಥವಾಗಿ ಕೇಂದ್ರಕ್ಕೆ ಗಾಲಿಕುರ್ಚಿಯನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಸೇವಾಭಾರತಿಯ ಖಜಾಂಚಿ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಉಪಸ್ಥಿತರಿದ್ದರು.



ದಿನಾಂಕ 22/04/2023 ರಂದು ಧರ್ಮಸ್ಥಳ ಗ್ರಾಮ ಕೊಡಿಯಡ್ಕದ ಶ್ರೀಮತಿ ರಾಜಲಕ್ಷ್ಮಿ ಕೆ.ಆರ್ ಮತ್ತು ಕುಟುಂಬಸ್ಥರು ಸೇವಾನಿಕೇತನ ಕಾರ್ಯಾಲಯ, ಕನ್ಯಾಡಿಗೆ ಭೇಟಿ ನೀಡಿ ಸಂಸ್ಥೆಗೆ ಕಮೋಡೋ ಚೇರ್ ಹಸ್ತಾಂತರಿಸಿದರು.

### ಏಪ್ರಿಲ್ ತಿಂಗಳ ಸೇವಾ ಕಾರ್ಯಗಳು

1. ಗಾಲಿಕುರ್ಚಿ ವಿತರಣೆ – 2
2. ಮೆಡಿಕಲ್ ಕಿಟ್ – 1

### ಏಪ್ರಿಲ್ ತಿಂಗಳ ಮಹನೀಯ ದಾನಿಗಳು

ಡಾ. ದೇವಿಪ್ರಸಾದ್ ಬೊಳ್ಮ, ಲಯನ್ಸ್ ಕ್ಲಬ್, ಬೆಳ್ತಂಗಡಿ
ಶ್ರೀಮತಿ ಮನೋರಮ ಭಟ್ ಜಿ.ವಿ., ಉಜಿರೆ
ಶ್ರೀ ರಜತ್ ರಾವ್, ಧರ್ಮಸ್ಥಳ
ಶ್ರೀ ವಿಠ್ಠಲ್ ಕುಂಗೂರ್, ಬೆಂಗಳೂರು
ಶ್ರೀ ಸಂದೇಶ್ ಕುಮಾರ್, ಧರ್ಮಸ್ಥಳ
ಶ್ರೀಮತಿ ಸುಷ್ಮಾ ಎನ್, ಬೆಂಗಳೂರು
ಶ್ರೀಮತಿ ಶಾಂತಿ, ಉಡುಪಿ
ಶ್ರೀ ಮೋಹನ್ ಎಸ್., ನಿಡ್ಲೆ
ಶ್ರೀಮತಿ ಅರ್ಚನಾ ಚೇತನ್, ಬೆಂಗಳೂರು
ಶ್ರೀಮತಿ ಜೋಸ್ವಿನ, ಬೆಳ್ತಂಗಡಿ
ಕು. ಸಮೀಕ್ಷಾ, ಧರ್ಮಸ್ಥಳ
ಶ್ರೀಮತಿ ರಾಜಲಕ್ಷ್ಮಿ, ಧರ್ಮಸ್ಥಳ
ಶ್ರೀ ಕುಸುಮಾಕರ ಮಹದೇವ ನಾಯ್ಕ್, ಸಿದ್ದಾಪುರ
ಶ್ರೀ ಬಿ. ನಾರಾಯಣ ರಾವ್, ಮೂಡಬಿದ್ರೆ
ಶ್ರೀ ಜಯರಾಜ್ ಸಾಲಿಯಾನ್, ಕಾನರ್ಪ
ಶ್ರೀ ಸಮರ್ಥ್ ಆರ್, ಬೆಂಗಳೂರು

### ಸೇವಾನಿಧಿ ದಾನಿಗಳು

ಶ್ರೀ ಕಾರ್ತಿಕ್ ಕೆ., ಧರ್ಮಸ್ಥಳ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀಮತಿ ಬಬಿತ, ಕನ್ಯಾಡಿ
ಡಾ. ರಾಮಕೃಷ್ಣ ಭಟ್ ಜಿ.ಎನ್, ಕನ್ಯಾಡಿ
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಶ್ರೀ ಶಿವಕುಮಾರ್, ಉಜಿರೆ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್, ಕಲ್ಮಂಜ
ಶ್ರೀ ಮಧುಸೂದನ್, ಉಜಿರೆ
ಶ್ರೀ ಶ್ರೀಧರ್ ಕೆ.ವಿ., ಉಜಿರೆ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀ ಮಧ್ವಮೂರ್ತಿ ಪಿ., ಉಡುಪಿ
ಶ್ರೀ ರಾಜೇಶ್ ಫಡ್ಕೆ, ಮುಂಡಾಜೆ
ಶ್ರೀಮತಿ ಛಾಯಾ ಸಿ.ಎಸ್., ಉಜಿರೆ

*When everyone else says you can't determination says, YES YOU CAN'*

## ರಕ್ತದಾನ ಶಿಬಿರ



**ಧರ್ಮಸ್ಥಳ (ಏ.26):** ಬೆಳ್ತಂಗಡಿಯ ವೀರಕೇಸರಿ (ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ) ಇದರ ನೇತೃತ್ವದಲ್ಲಿ ಮಂಗಳೂರಿನ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ, ಲೇಡಿಗೋಶನ್ ಆಸ್ಪತ್ರೆ ಇವರ ಸಹಯೋಗದೊಂದಿಗೆ ರಕ್ತದಾನ ಶಿಬಿರವು ಎಪ್ರಿಲ್–26 ರಂದು ಧರ್ಮಸ್ಥಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ) ಇದರ ಅಟಲ್ ಜೀ ಸಭಾಭವನದಲ್ಲಿ ನಡೆಯಿತು.

ಬೆಳ್ತಂಗಡಿ ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೊ. ಮನೋರಮ ಭಟ್ ಶಿಬಿರವನ್ನು ಉದ್ಘಾಟಿಸಿ, ರಕ್ತದಾನದ ಮಹತ್ವವನ್ನು ತಿಳಿಸುತ್ತಾ, ಅನ್ನದಾನಕ್ಕಿಂತ ರಕ್ತದಾನ ಶ್ರೇಷ್ಠದಾನವೆಂದು ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಮಂಗಳೂರಿನ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಲೇಡಿಗೋಶನ್ ಆಸ್ಪತ್ರೆಯ ಜಿಲ್ಲಾ ಸಂಯೋಜಕರಾದ ಪ್ರವೀಣ್ ಕುಮಾರ್ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಶ್ರೀ ಪ್ರೀತಮ್ ಡಿ., ಅಧ್ಯಕ್ಷರು, ಸಿ.ಎ.ಬ್ಯಾಂಕ್, ಧರ್ಮಸ್ಥಳ, ಜಯ ಮೋನಪ್ಪಗೌಡ, ಅಧ್ಯಕ್ಷರು ಗ್ರಾಮ ಪಂಚಾಯತ್, ಧರ್ಮಸ್ಥಳ, ಶ್ರೀ ಬಾಲಕೃಷ್ಣ ಕಾರ್ಯದರ್ಶಿ, ಸೇವಾಭಾರತಿ ಬೆಳ್ತಂಗಡಿ, ಲI ಡಾI ದೇವಿಪ್ರಸಾದ್ ಬೊಳ್ಮ, ಅಧ್ಯಕ್ಷರು, ಲಯನ್ಸ್ ಕ್ಲಬ್, ಬೆಳ್ತಂಗಡಿ, ರೊI ಶ್ರೀಧರ್ ಕೆ.ವಿ. ಅಧ್ಯಕ್ಷರು, ಔಷಧಿ ವ್ಯಾಪಾರಸ್ಥರ ಸಂಘ, ಬೆಳ್ತಂಗಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಒಟ್ಟು 81 ಯೂನಿಟ್ ರಕ್ತ ಸಂಗ್ರಹಿಸಲಾಯಿತು. ಇದರಲ್ಲಿ 4 ಜನ ಮಹಿಳೆಯರು ರಕ್ತದಾನ ಮಾಡಿರುವುದು ಉಲ್ಲೇಖನೀಯ. ಕಾರ್ಯಕ್ರಮವನ್ನು ಔಷಧಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ಶ್ರೀಧರ್ ಕೆ.ವಿ. ನಿರೂಪಿಸಿದರು.

ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ ಧರ್ಮಸ್ಥಳ, ಔಷಧಿ ವ್ಯಾಪಾರಸ್ಥರ ಸಂಘ ಬೆಳ್ತಂಗಡಿ, ರೋಟರಿ ಕ್ಲಬ್ ಬೆಳ್ತಂಗಡಿ, ಲಯನ್ಸ್ ಕ್ಲಬ್, ಬೆಳ್ತಂಗಡಿ, ಸೇವಾಭಾರತಿ ಕನ್ಯಾಡಿ ಸಂಸ್ಥೆಗಳು ಭಾಗವಹಿಸಿತ್ತು.

## ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಕ್ರಮ



**ಶೃಂಗೇರಿ ( ಏ.20)**ರಂದು ಸೇವಾಭಾರತಿ–ಸೇವಾಧಾಮದ ವತಿಯಿಂದ ಶೃಂಗೇರಿಯ ಶ್ರೀ ಅಭಿನವ ವಿದ್ಯಾ ತೀರ್ಥ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ವೈದ್ಯರು ಮತ್ತು ಸಿಬ್ಬಂದಿಗಳು ಹಾಗೂ ಸಾರ್ವಜನಿಕರಿಗೆ ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಯ ಬಗ್ಗೆ ಸೇವಾಭಾರತಿಯ ಕಾರ್ಯಕ್ರಮ ಸಂಯೋಜಕರಾದ ಆಶ್ರಿತ್ ಪಿ.ಪಿ. ಇವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಆಸ್ಪತ್ರೆಯ ವೈದ್ಯರು, ಸಿಬ್ಬಂದಿವರ್ಗ ಮತ್ತು ಸಾರ್ವಜನಿಕರು ಹಾಗೂ ದಕ್ಷಿಣಕನ್ನಡ ಮತ್ತು ಕಾಸರಗೋಡು ಜಿಲ್ಲೆಯ ಹಿರಿಯ ಕ್ಷೇತ್ರಸಂಯೋಜಕರಾದ ಅಖಿಲೇಶ್. ಎ. ಉಪಸ್ಥಿತರಿದ್ದರು

ಒಟ್ಟು 68 ಮಂದಿ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮವನ್ನು ಶ್ರೀ ಅಭಿನವ ವಿದ್ಯಾ ತೀರ್ಥ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ. ಲಕ್ಷ್ಮೀನಾರಾಯಣ ಸ್ವಾಗತಿಸಿ ಧನ್ಯವಾದವಿತ್ತರು.

## ರಾಷ್ಟ್ರಿಯ ಸೇವಾಸಂಗಮ –2023




ಜೈಪುರ್: ಎಪ್ರಿಲ್ 7 ರಿಂದ 9ರ ವರೆಗೆ ಜೈಪುರ್‌ನ ಕೇಶವ ವಿದ್ಯಾಪೀಠ ಜಂದೋಲಿಯಲ್ಲಿ ರಾಷ್ಟ್ರಿಯ ಸೇವಾಸಂಗಮ –2023 3 ದಿನಗಳ ಕಾರ್ಯಕ್ರಮವು ನಡೆಯಿತು. ಈ ಕಾರ್ಯಕ್ರಮದಲ್ಲಿ ಸೇವಾಭಾರತಿ ಕನ್ಯಾಡಿಯಿಂದ ಮ್ಯಾನೇಜರ್ ಮೋಹನ್ ಎಸ್. ಹಾಗೂ ಸೀನಿಯರ್ ಮ್ಯಾನೇಜರ್ ಚರಣ್ ಕುಮಾರ್ ಎಂ. ಭಾಗವಹಿಸಿದ್ದರು.

# ಸೇವಾಧಾಮದಲ್ಲಿ ಕು. ಭಾವನಳ ಹುಟ್ಟುಹಬ್ಬ ಆಚರಣೆ




**ಕೊಕ್ಕಡ: : (ಏ.25)** ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಭಾರತೀಯ ಮಜ್ದೂರು ಸಂಘದ ಕಾರ್ಯದರ್ಶಿ ಹಾಗೂ ಸೇವಾಭಾರತಿಯ ಕಾರ್ಯಕರ್ತರಾದ ಶ್ರೀ ಜಯರಾಜ್, ಸಾಲ್ಯಾನ್ ಕಾನರ್ಪ ಮತ್ತು ಕುಟುಂಬಸ್ಥರು ಭೇಟಿ ನೀಡಿ ತಮ್ಮ ಮಗಳು ಭಾವನಳ ಹುಟ್ಟುಹಬ್ಬವನ್ನು ಬೆನ್ನುಹುರಿ ಅಪಘಾತಕ್ಕೊಳಗಾದ ಸೇವಾಧಾಮದ ಸನಿವಾಸಿಗಳೊಂದಿಗೆ ಆಚರಿಸಿದರು. ಸೇವಾಧಾಮದ ಸಿಬ್ಬಂದಿಗಳು ಅವಳ ಮುಂದಿನ ಭವಿಷ್ಯಕ್ಕೆ ಶುಭ ಹಾರೈಸಿದರು.

SEVA BHARATHI

**ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿನ ಪುನಃಶ್ಚೇತನ ಕೇಂದ್ರಗಳಲ್ಲಿ ಸಿಗುವ ಸೌಲಭ್ಯಗಳು**

* ಫಿಸಿಯೋಥೆರಪಿ
* ಆಕ್ಯುಪೇಶನಲ್ ಥೆರಪಿ
* ಗಾಲಿಕುರ್ಚಿ ಅಭ್ಯಾಸ
* ಆಹಾರ ಪಥ್ಯಕ್ರಮ
* ದಿನನಿತ್ಯದ ಚಟುವಟಿಕೆಗಳಿಗೆ ತರಬೇತಿ
* ಸರಕಾರದಿಂದ ಸಿಗುವ ಸೌಲಭ್ಯಗಳ ಮಾಹಿತಿ
* ಗಾಲಿಕುರ್ಚಿಗಳು
* ಕ್ಯಾಲಿಪರ್ ಹಾಗೂ ವಾಕರ್‌ಗಳು
* ಔಷಧಿ ಕಿಟ್
* ಪ್ರಾಣಾಯಾಮ & ಯೋಗಾಸನ
* ಸ್ವ ಉದ್ಯೋಗಕ್ಕೆ ಮಾಹಿತಿ
* ಆಪ್ತ ಸಮಾಲೋಚನೆ
* ವೈದ್ಯರ ಸಲಹೆ ಇತ್ಯಾದಿ

Sep 5th World Spinal Cord Injury Day

ಸೇವೆಯೆಂಬ ಯಜ್ಞದಲ್ಲಿ ಸಮಿಧೆಯಂತೆ ಉರಿಯೋಣ.

ಪ್ರಕಟಣೆ

**ಸೇವಾಧಾಮ**

ಬೆನ್ನುಮೂಳೆ ಮುರಿತಗೊಂಡವರಿಗಾಗಿನ
ಪುನಃಶ್ಚೇತನ ಕೇಂದ್ರ, ಸೌತಡ್ಕ, ಬೆಳ್ತಂಗಡಿ ತಾ॥
ಮೊ.: 9448254888
(ಸೇವಾಭಾರತಿ ಬೆಳ್ತಂಗಡಿ (ರಿ.) ಇದರ ಘಟಕ)

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನಾನು ಪ್ರದೀಪ್ ಕೆ., ದಕ್ಷಿಣಕನ್ನಡ ಪುತ್ತೂರುತಾಲೂಕು ಕೊಡಿಪ್ಪಾಡಿಯ ನಿವಾಸಿ. ನಾನು ಹುಟ್ಟಿದಾಗಿನಿಂದ Lumbar spine Tumor (lipoma) ನ ಸಮಸ್ಯೆಯಿಂದ ಬಳಲುತ್ತಿದ್ದೆ. ಇದರಿಂದಾಗಿ ನನ್ನ ಸೊಂಟದಿಂದ ಕೆಳಗಿನ ಭಾಗ ದಿನಕಳೆದಂತೆ ಬಲಹೀನವಾಗುತಿತ್ತು. ಇದನ್ನು ತಡೆಯುವುದಕ್ಕಾಗಿ 2016 ಡಿಸೆಂಬರ್‌ನಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ tumor ತೆಗೆಸಲಾಯಿತು. ಶಸ್ತ್ರಚಿಕಿತ್ಸೆಯ ಸಂಧರ್ಭದಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ನನ್ನ ಸೊಂಟದಿಂದ ಕೆಳಗಿನಭಾಗ ಸಂಪೂರ್ಣವಾಗಿ ಬಲಹೀನವಾಯಿತು. ಇದರಿಂದಾಗಿ ನಾನು ಸ್ವತಂತ್ರವಾಗಿ ಓಡಾಡುವುದಕ್ಕೆ ಸಾಧ್ಯವಾಗಲಿಲ್ಲ.

ದೀರ್ಘ ಸಮಯ ಕುಳಿತುಕೊಳ್ಳಲು ಸಾಧ್ಯವಾಗದೇ ಇದ್ದುದರಿಂದ ನನ್ನ ಬ್ಯಾಂಕಿಂಗ್ ಉದ್ಯೋಗಕ್ಕೆ ರಾಜೀನಾಮೆ ನೀಡಬೇಕಾಯಿತು. ಇದರಿಂದ ನಾನು ಮಾನಸಿಕವಾಗಿ ಮತ್ತು ದೈಹಿಕವಾಗಿ ಕ್ಷೋಭೆಗೊಳಗಾಗಿದ್ದೆ ಮತ್ತು ನಿರ್ಲಕ್ಷಕೊಳಗಾಗಿದ್ದೆ. ಈ ಸಂದರ್ಭದಲ್ಲಿ ನನಗೆ ಸೇವಾಧಾಮದ ಪರಿಚಯವಾಯಿತು. ನಾಲ್ಕು ಗೋಡೆಗಳ ಮಧ್ಯೆ ನಿರ್ಲಕ್ಷ್ಯಕೊಳಗಾಗಿದ್ದ ನನಗೆ ಸೇವಾಧಾಮದಲ್ಲಿ ಸ್ಪೂರ್ತಿ ಮತ್ತು ಧೈರ್ಯ ಸಿಕ್ಕುವಂತಾಯಿತು. ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಬೆಳೆದುಬಂದ ರೀತಿಯನ್ನು ಕೇಳಿ ನಾನು ಕೂಡ ಏನಾದರೂ ಸಾಧನೆ ಮಾಡಬೇಕೆಂದು ನಿರ್ಧರಿಸುವಂತಾಯಿತು. ಉದ್ಯೋಗ ಮಾಡಲು ಪ್ರೇರಣೆ ಸಿಗುವಂತಾಯಿತು. ವಿಕಲಾಂಗತೆಯುನ್ನು ಹೇಗೆ ನಿರ್ವಹಿಸಬೇಕೆಂದು ತಿಳಿದುಕೊಂಡು ಎಲ್ಲರಂತೆ ನಾನು ಬದುಕಬಹುದು ಎಂಬುದನ್ನು ಅರಿತುಕೊಂಡೆ. ಇದಕ್ಕೆಲ್ಲ ಕಾರಣವಾದ ಸೇವಾಧಾಮ ಮತ್ತು ಸೇವಾಭಾರತಿಯ ಅಧ್ಯಕ್ಷರು, ಕಾರ್ಯದರ್ಶಿ, ಪದಾಧಿಕಾರಿಗಳು, ಸಿಬ್ಬಂದಿಗಳೆಲ್ಲರಿಗೂ ನನ್ನ ನಮನಗಳು.

**– ಪ್ರದೀಪ್ ಕೆ.**

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತದ ವಾರ್ಷಿಕ ಕ್ರಿಯಾಯೋಜನಾ ಸಭೆ







**ಪುತ್ತೂರು (ಏ. 22):** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತದ ವಾರ್ಷಿಕ ಕ್ರಿಯಾಯೋಜನಾ ಸಭೆಯು ಪುತ್ತೂರಿನ ತೆಂಕಿಲದ 'ಚುಂಚಶ್ರೀ' ಒಕ್ಕಲಿಗಗೌಡ ಸಮುದಾಯ ಭವನದಲ್ಲಿ ಎಪ್ರಿಲ್ 22 ರಂದು ನಡೆಯಿತು.

ಸೇವಾಭಾರತಿ ಸಂಸ್ಥೆಯ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಕಾರ್ಯಕ್ರಮವನ್ನು ಉದ್ಘಾಟಿಸಿ ಸಿಬ್ಬಂದಿಗಳಿಗೆ ಹಾಗೂ ಸಂಸ್ಥೆಯ ಬೆಳವಣಿಗೆಗೆ ಶುಭ ಹಾರೈಸಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್, ಉಪಾಧ್ಯಕ್ಷರಾದ ಶ್ರೀ ಉಮೇಶ್ ರೈ, ಕಾರ್ಯನಿರ್ವಾಹಕರಾದ ಶ್ರೀ ವಸಂತ ನಾಯಕ್, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸ್ವಚ್ಛಭಾರತ ಮತ್ತು ಪ್ಲಾಸ್ಟಿಕ್ ಮುಕ್ತಭಾರತದ ಯೋಜನೆಯಡಿ ಬಟ್ಟೆಯ ಕೈಚೀಲಗಳನ್ನು ಬಿಡುಗಡೆಗೊಳಿಸಲಾಯಿತು. ಒಟ್ಟು 104 ಮಂದಿ ಸಿಬ್ಬಂದಿಗಳು ಹಾಗೂ 16 ಮಂದಿ ನಿರ್ದೇಶಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

## ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ಸಂದರ್ಶಕರ ಅನಿಸಿಕೆಗಳು

1. ಜೀವನದಲ್ಲಿ ಆಸೆ ಇಲ್ಲದಂತಾಗಿ ಜೀವನ್ಮರಣ ಹೋರಾಟ ನಡೆಸುತ್ತಿರುವ ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಪುನಃ ಬದುಕಿಗೆ ಆಶಾಕಿರಣವಾಗಿರುವ ಈ ಸೇವಾಕೇಂದ್ರದ ಕಾರ್ಯಕ್ಕೆ ತುಂಬುಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

   – ಕೆ.ಎಲ್. ಸುರೇಶ್, ಕೊಪ್ಪ

2. Great Humanitarian works

   - **S M Haridas,** Chairman, Indian Redcross society, Belthangady

## ಏಪ್ರಿಲ್ ತಿಂಗಳಲ್ಲಿ ಹುಟ್ಟುಹಬ್ಬ ಆಚರಿಸಿದ ನಿಮಗೆ ಶುಭಾಶಯಗಳು



ಶ್ರೀ ಮೋಹನ್ ಎಸ್., ನಿಡ್ಲೆ



ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ, ಉಡುಪಿ



ಶ್ರೀ ನಿಖಿತ್ ಗೋವರ್ಧನ್, ಕೆನಡ



ಕು. ಸಮೀಕ್ಷಾ, ಧರ್ಮಸ್ಥಳ



ಡಾ. ಅರ್ಚನ ಚೇತನ್, ಬೆಂಗಳೂರು



ಶ್ರೀಮತಿ ಜೋಸ್ಪಿನ ಪಿ.ಟಿ., ಗಂಡಿಬಾಗಿಲು

## ನಿಮಗಿದು ತಿಳಿದಿರಲಿ

### ಬೆನ್ನುಹುರಿ ಅಪಘಾತ ಸಂಗತಿಗಳು ನಿಮಗೆ ಗೊತ್ತೇ?

* ಒಂದೇ ಸ್ಟ್ರೋಕ್‌ನಲ್ಲಿ ಬಹು ಅಂಗವೈಕಲ್ಯ ಜೀವಮಾನದ ಅಂಗವೈಕಲ್ಯ
* ಕ್ರಿಯಾತ್ಮಕ ಸಾಮರ್ಥ್ಯದ ಮೇಲೆ ಸಂಪೂರ್ಣ ಹಾಗೂ ಭಾಗಶಃ ವೈಕಲ್ಯ
* ವೈಕಲ್ಯಪೂರ್ಣ ಗುಣಮುಖವಾಗದ ವೈಕಲ್ಯತೆ
* ಸರ್ಜರಿ ಎಂದರೆ ಚೇತರಿಕೆ ಅಲ್ಲ
* ಮುಂದಿರುವ ಏಕೈಕ ಮಾರ್ಗವೆಂದರೆ ಗುಣಮಟ್ಟದ ಪುನಃಶ್ಚೇತನ
* ಕೌನ್ಸಿಲಿಂಗ್, ಫಿಸಿಯೋಥೆರಪಿಸ್ಟ್‌ಗಳು, ಆಕ್ಯುಪೇಶನ್ ಥೆರಪಿಗಳು

### ಸೇವೆಗಳು ಬಹು ಅಮೂಲ್ಯ ಮತ್ತು ಅತ್ಯಗತ್ಯ.

* ಕ್ವಾಡ್ರಾಪ್ಲೀಜಿಯಾ ಎಂದರೆ ಕತ್ತಿನ ಮಟ್ಟದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರು (ಚತುರ್ಪಾದ ವೈಕಲ್ಯ)
* ಪ್ಯಾರಾಪ್ಲಿಜಿಯಾ ಎಂದರೆ ಕತ್ತಿನ ಮಟ್ಟದಿಂದ ಕೆಳಗಡೆ ಬೆನ್ನುಹುರಿ ಅಪಘಾತಕ್ಕೀಡಾದವರು (ದ್ವಿಪಾದ ವೈಕಲ್ಯ)

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ ಕಿಟ್‌ಗಳು.

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

## Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our charactes... not destroy us*

# ಬೆನ್ನುಹುರಿ ಅಪಘಾತಕ್ಕೊಳಗಾದರೂ ತನ್ನ ಜೀವನವನ್ನು ಕೃಷಿಯಲ್ಲಿ ರೂಪಿಸಿಕೊಂಡ ನವೀನ್ ಮುರೂಳ್ಯರವರ ಯಶೋಗಾಥೆ

ಮನುಷ್ಯನು ತಾನು ಅಂದು ಕೊಂಡಂತೆ ಎಲ್ಲವೂ ಆಗುತ್ತದೆ ಎಂದು ತನ್ನ ಜೀವನ ಸಾಗಿಸುತ್ತಾ ಇರುತ್ತಾನೆ. ಅಂತಹ ಸಮಯದಲ್ಲಿ ಕೆಲವೊಮ್ಮೆ ಆತನ ದುರದೃಷ್ಟದಿಂದಾಗಿ ಅನಿರೀಕ್ಷಿತ ಘಟನೆಗಳು ಸಂಭವಿಸುತ್ತದೆ. ಹೀಗೆ ಸಾಮಾನ್ಯ ಜೀವನ ನಡೆಸುತ್ತಿದ್ದ ವ್ಯಕ್ತಿಯು ಬೆನ್ನುಹುರಿ ಅಪಘಾತಕ್ಕೊಳಗಾದರೂ ಅದನ್ನು ಛಲದಿಂದ ಎದುರಿಸಿ ಕೃಷಿಯಲ್ಲೇ ತಮ್ಮ ಜೀವನ ರೂಪಿಸಿಕೊಂಡಿರುವ ನವೀನ್ ಮುರೂಳ್ಯರ ಯಶಸ್ಸಿನ ಕಥೆ ಇದು.

ನವೀನ್ ಕುಮಾರ್ ಕೆ ಇವರು 1987 ಮಾರ್ಚ್ 21 ರಂದು ಸುಳ್ಯ ತಾಲೂಕಿನ ಮುರುಳ್ಯದಲ್ಲಿ ಜನಿಸಿದರು. ಇವರಿಗೆ 4 ಸಹೋದರರು ಮತ್ತು ಒಬ್ಬಳು ಸಹೋದರಿ. 2008 ರಲ್ಲಿ ನಿಂತಿಕಲ್ಲು ಕೆ ಎಸ್ ಗೌಡ ಕಾಲೇಜಿನಲ್ಲಿ ತಮ್ಮ ಐ.ಟಿ.ಐ ಪದವಿಯನ್ನು ಪೂರ್ಣಗೊಳಿಸಿದರು. ತಮ್ಮ ಶಿಕ್ಷಣದ ನಂತರ ಉದ್ಯೋಗಕ್ಕಾಗಿ ಬೆಂಗಳೂರಿಗೆ ತೆರಳಿ ತಮ್ಮ ಮುಂದಿನ ವೃತ್ತಿ ಜೀವನ ಪ್ರಾರಂಭಿಸಿದರು.

ನಂತರ 2009 ರಲ್ಲಿ ತಮ್ಮ ಸಹೋದರಿಯ ಮದುವೆಗೆ ಎಂದು ಊರಿಗೆ ಬಂದರು.ಮನೆಯಲ್ಲಿ ತಮ್ಮ ತಂದೆ ತಾಯಿಯೊಂದಿಗೆ ಯಾರೂ ಇಲ್ಲದ ಕಾರಣ ಊರಿನಲ್ಲೇ ಉಳಿದು ಜೀವನ ಮುಂದುವರೆಸಲು ನಿರ್ಧರಿಸಿದರು. ಎಲ್ಲಾ ಸರ್ಕಾರಿ ಹುದ್ದೆಗಳಿಗೆ ಪ್ರಯತ್ನಿಸಿದರೂ ಉದ್ಯೋಗ ದೊರಕದ ಕಾರಣ ಪಿಕ್ ಅಪ್ ಡ್ರೈವರ್, ಅಡಿಕೆ ಮರಗಳಿಗೆ ಔಷಧ ಬಿಡುವ ಕೆಲಸಗಳನ್ನು ಮಾಡಿ ಕುಟುಂಬ ಸಾಗಿಸುವ ನೊಗ ಹೊತ್ತರು.

ಹೀಗೆ ಜೀವನ ಸಾಗಿಸುತ್ತಿದ್ದಾಗ 2014 ರಲ್ಲಿ ಒಂದು ದುರ್ಘಟನೆ ಸಂಭವಿಸಿತು. ಅಡಿಕೆ ಮರಕ್ಕೆ ಔಷಧ ಬಿಡುತ್ತಿದ್ದಾಗ ಮರದಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾದರು. ಬೆನ್ನು ಹುರಿ ಅಪಘಾತಕ್ಕೊಳಗಾದ ಕಾರಣ ಮಂಗಳೂರಿನ ಎ ಜೆ ಆಸ್ಪತ್ರೆಯಲ್ಲಿ 15 ದಿನಗಳ ಕಾಲ ಚಿಕಿತ್ಸೆ ಪಡೆದರು.

ಚಿಕಿತ್ಸೆಯ ನಂತರ ಮನೆಗೆ ಬಂದು ಒಂದೇ ವಾರದಲ್ಲಿ ಒತ್ತಡಗಾಯದಂತಹ ದ್ವಿತೀಯಾಂತರ ಸಮಸ್ಯೆಯಿಂದಾಗಿ ಪುನಃ ಎ ಜೆ ಆಸ್ಪತ್ರೆಗೆ ದಾಖಲಾದರು. ದಾಖಲಾಗಿ 3 ತಿಂಗಳಕಾಲ ಚಿಕಿತ್ಸೆ ಪಡೆದು ಪ್ಲಾಸ್ಟಿಕ್ ಸರ್ಜರಿ ನಂತರ ಸ್ವಲ್ಪ ಗುಣಮುಖರಾಗಿ ಬರುತ್ತಾರೆ. ತದ ನಂತರ 2–3 ವರ್ಷಗಳು ಯಾವುದೇ ಆರೋಗ್ಯದಲ್ಲಿ ಸುಧಾರಣೆಯಿಲ್ಲದೆ ಎಲ್ಲಾ ಕಾರ್ಯಗಳಿಗೂ ಮನೆಯವರಿಗೆ ಅವಲಂಬನೆಯಾಗಿ ಜೀವನ ಸಾಗಿಸುತ್ತಿರುತ್ತಾರೆ.

ಹೀಗಿರುವಾಗ ಒಂದು ದಿನ ತಮ್ಮ ಅಣ್ಣನಿಂದ ಸೇವಾಧಾಮದ ಬಗ್ಗೆ ತಿಳಿದು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಅವರೊಂದಿಗೆ ಮಾತನಾಡಿ 2019 ರಲ್ಲಿ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಬಂದು 3 ತಿಂಗಳಕಾಲ ಪುನಶ್ಚೇತನಗೊಂಡು ಮನೆಗೆ ತೆರಳುತ್ತಾರೆ.

2–3 ವರ್ಷಗಳಲ್ಲಿ ಯಾವುದೇ ಆರೋಗ್ಯದಲ್ಲಿ ಚೇತರಿಕೆ ಇಲ್ಲದ ನವೀನ್ ಪುನಶ್ಚೇತನ ಕೇಂದ್ರಕ್ಕೆ ಬಂದು ಗಾಲಿ ಕುರ್ಚಿ ಕೌಶಲ್ಯ,ಸ್ವತಂತ್ರವಾಗಿ ತಮ್ಮ ಕೆಲಸಗಳನ್ನು ತಾವೇ ಮಾಡಲು ಅದರೊಂದಿಗೆ ಮುಂದಿನ ಜೀವನ ಶೈಲಿ ಯನ್ನು ಹೇಗೆ ನಿಭಾಯಿಸಿಕೊಂಡು ಹೋಗಬೇಕೆಂಬುದನ್ನು ತಿಳಿದುಕೊಳ್ಳುತ್ತಾರೆ.





**2–3 ವರ್ಷಗಳಲ್ಲಿ ಯಾವುದೇ ಆರೋಗ್ಯದಲ್ಲಿ ಚೇತರಿಕೆ ಇಲ್ಲದ ನವೀನ್ ಪುನಶ್ಚೇತನ ಕೇಂದ್ರಕ್ಕೆ ಬಂದು ಗಾಲಿ ಕುರ್ಚಿ ಕೌಶಲ್ಯ, ಸ್ವತಂತ್ರವಾಗಿ ತಮ್ಮ ಕೆಲಸಗಳನ್ನು ತಾವೇ ಮಾಡಲು ಅದರೊಂದಿಗೆ ಮುಂದಿನ ಜೀವನ ಶೈಲಿಯನ್ನು ಹೇಗೆ ನಿಭಾಯಿಸಿಕೊಂಡು ಹೋಗಬೇಕೆಂಬುದನ್ನು ತಿಳಿದುಕೊಂಡು, ನಂತರ ಕೃಷಿಯಲ್ಲಿ ಬದುಕು ರೂಪಿಸಿಕೊಂಡ ಇವರ ಕಥೆ ಇತರ ಕೃಷಿಕರಿಗೆ ಸ್ಪೂರ್ತಿ.**

ಸೇವಾಭಾರತಿಯಿಂದ ಗಾಲಿಕುರ್ಚಿ, ಸೆಲ್ಫ್ ಕೇರ್ ಕಿಟ್, ಮೆಡಿಕಲ್ ಕಿಟ್ ಹಾಗೂ ಜೀವನೋಪಾಯ ಯೋಜನೆಯಡಿ 2 ಜೇನು ಪೆಟ್ಟಿಗೆ ನಂತಹ ಸೌಲಭ್ಯಗಳನ್ನು ಪಡೆದಿದ್ದಾರೆ.

ಪ್ರಸ್ತುತ ತಮ್ಮ ಮನೆಯಲ್ಲಿ 14 ಜೇನು ಪೆಟ್ಟಿಗೆಯಿಂದ ಜೇನು ಕೃಷಿ, ಒಂದು ದನ, ಹಾಗೂ ಅಡುಗೆ ಕೆಲಸಗಳನ್ನು ತಾವೇ ಸ್ವತಃ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ ಇತ್ತೀಚಿಗೆ 200 ಅಡಿಕೆ ಗಿಡಗಳನ್ನು ನೆಟ್ಟು ಅದರ ಪೋಷಣೆಯನ್ನು ಮಾಡುತ್ತಿದ್ದಾರೆ. ಹೀಗೆ ಬೆನ್ನುಹುರಿ ಅಪಘಾತಗೊಂಡ ಇತರರಿಗೆ ಇವರು ಕೃಷಿ ಯಲ್ಲಿ ಬದುಕು ರೂಪಿಸಿಕೊಂಡು ಮಾದರಿಯಾಗಿರುತ್ತಾರೆ.